**O.S. 114-18 PW : 1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 27.10.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ S R A, ವಕೀಲರಿಂದಃ**

2. ಒಟ್ಟು ಎಷ್ಟು ಜನ ಪ್ರತಿವಾದಿಗಳನ್ನು ಮಾಡಿದ್ದೇನೆ ಅಂದರೆ ಗೊತ್ತಿಲ್ಲ. ಬಿಲ್ಡರ ಹಾಗೂ ಖರೀದಿದಾರರನ್ನು ಪಕ್ಷಗಾರರನ್ನಾಗಿ ಮಾಡಿದ್ದೇನೆ. ರಾಜು ಹಿರೇಮಠ ರವರು ಗೊತ್ತಿರುವವರು ಬಿಲ್ಡರ ಒಬ್ಬರೇ. ಪ್ರತಿವಾದಿ ನಂಃ 3 ರವರು ಪರಿಚಯವಿಲ್ಲ. 2 ನೇ ಪ್ರತಿವಾದಿ ಜೊತೆಗೆ 3 ನೇ ಪ್ರತಿವಾದಿ ಇರುವುದರಿಂದ ಪಕ್ಷಗಾರರನ್ನಾಗಿ ಮಾಡಿದ್ದೇನೆ. 4 ರಿಂದ 8 ನೇ ಪ್ರತಿವಾದಿಗಳ ಪರಿಚಯವಿಲ್ಲ. ಅವರನ್ನು ಏತಕ್ಕಾಗಿ ಪಕ್ಷಗಾರರನ್ನಾಗಿ ಮಾಡಿದ್ದೇನೆ ಅಂತಾ ಗೊತ್ತಿಲ್ಲ. ನಾನು ವಕೀಲರಿಗೆ ಬಿಲ್ಡರ ಹಾಗೂ ಖರೀದಿದಾರರನ್ನು ಪಕ್ಷಗಾರರನ್ನಾಗಿ ಮಾಡಿ ಅಂತಾ ಹೇಳಿದ್ದೆನು. ದಾವೆ ಮಾಡುವಾಗ ಈ ವಿಷಯ ಹೇಳಿದ್ದೆನು. ನಾನು ವಾದ ಪತ್ರಕ್ಕೆ ಸಹಿ ಮಾಡುವಾಗ ನನ್ನ ಹೇಳಿಕೆ ಪ್ರಕಾರ ಪಕ್ಷಗಾರರನ್ನಾಗಿ ಮಾಡಿದ್ದಾರೆ ಅಥವಾ ಇಲ್ಲವೋ ಅಂತಾ ನೋಡಿದ್ದು ನೆನಪಿಲ್ಲ. ನಾನು ದಾವೆ ಸಲ್ಲಿಸುವಾಗ ಎಲ್ಲಾ ಪಕ್ಷಗಾರರು ವಾದ ಪತ್ರದಲ್ಲಿ ಇದ್ದರೋ ಅಥವಾ ಇಲ್ಲವೋ ಅಂತಾ ನೆನಪಿಲ್ಲ. 2018 ಏಪ್ರಿಲ್ ತಿಂಗಳಲ್ಲಿ ದಾವೆ ಸಲ್ಲಿಸುವಾಗ ನಾನು ಪೂನಾದಲ್ಲಿ ಖಾಸಗಿ ಕೆಲಸ ಮಾಡುತ್ತಿದ್ದೆನು. ಈಗಲೂ ನಾನು ಪೂನಾದಲ್ಲಿದ್ದೇನೆ. 2009 ರಿಂದ ಇಲ್ಲಿಯವರೆಗೆ ನಾನು ಪೂನಾದಲ್ಲಿದ್ದೇನೆ.

3. ವಕೀಲರಿಗೆ ವಾದ ಪತ್ರವನ್ನು ತಯಾರಿಸಲು ನನ್ನ ತಂದೆ ಹಾಗೂ ಚಂದ್ರಶೇಖರ ಅರಮನೆ ನನ್ನ ಹೆಂಡತಿ ತಂದೆ ಮಾಹಿತಿ ನೀಡಿದ್ದಾರೆ. ವಾದ ಪತ್ರವನ್ನು ಸಂಪೂರ್ಣವಾಗಿ ಓದಿ ತಿಳಿದುಕೊಂಡು ಸಹಿ ಮಾಡಿದ್ದೇನೆ. ಪಿ ಡಿ ಶಿರೂರ, ಆರ್ ಜೆ ಹಿರೇಮಠ ಹಾಗೂ ಎಸ್ ಜಿ ಹಿರೇಮಠ ರವರು ಬಿಲ್ಡರ ಆಗಿದ್ದರು ಅಂತಾ ನಮ್ಮ ತಂದೆ ಹಾಗೂ ಮಾವನವರು ಹೇಳಿ ಬರೆಸಿದ್ದಾರೆ. ಇದರ ಬಾಬತ್ತು ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ. ನನ್ನ ಮಾವ ಹಾಗೂ ತಂದೆ ವಕೀಲರಿಗೆ ಮಾಹಿತಿ ನೀಡಿ ಈ ತರಹ ಬರೆಸಿದ್ದಾರೆ ಅಂದರೆ ಸರಿ. ಮೇಲೆ ಹೇಳಿದ 3 ಜನ ಬಿಲ್ಡರ ತೋರಿಸಲು ದಾಖಲೆ ಹಾಜರಪಡಿಸಿಲ್ಲ ಅಂದರೆ ಸರಿ.

4. ಪ್ರತಿವಾದಿ 4 ರಿಂದ 8 ರವರನ್ನು ನಮ್ಮ ತಂದೆ ಹಾಗೂ ಮಾವನವರ ಹೇಳಿಕೆಗಳ ಆಧಾರದ ಮೇಲೆ ನಮ್ಮ ವಕೀಲರು ಅವರನ್ನು ಪಕ್ಷಗಾರರನ್ನಾಗಿ ಮಾಡಿದ್ದಾರೆ ಅಂದರೆ ಸರಿ.

**O.S. 114-18** **PW : 1**

ನನ್ನ ಹಾಗೂ 2 ನೇ ಪ್ರತಿವಾದಿ ನಡುವೆ ಲಿಖಿತ ಕರಾರುವಾಗಿದೆ ಅಂತಾ ತೋರಿಸಲು ದಾಖಲೆ ಹಾಜರಪಡಿಸಿಲ್ಲ ಅಂದರೆ ಸರಿ. ನಾವು ಕೇಳಿದರೂ ಸಹ ಅವರು ಕರಾರು ಪತ್ರ ಮಾಡಿಕೊಟ್ಟಿಲ್ಲ. ನಾವು ಕೊಟ್ಟ ಚೆಕ್ ಹಣಕ್ಕೆ ರಶೀದಿ ಕೊಟ್ಟಿದ್ದರು, ಅದನ್ನು ನಾನು ಕಳೆದುಕೊಂಡಿದ್ದೇನೆ. ನಾನೇ 2 ನೇ ಪ್ರತಿವಾದಿಗೆ ಕರಾರು ಪತ್ರ ಬರೆದುಕೊಡು ಅಂತಾ ಕೇಳಿದ್ದೆನು. ಯಾವಾಗ ಕೇಳಿದ್ದೆನು ಅಂತಾ ನೆನಪಿಲ್ಲ, ಹಣ ಕೊಟ್ಟ ನಂತರ ಕೇಳಿದ್ದೆನು. ಯಾವ ತಿಂಗಳು ಹಾಗೂ ವರ್ಷ ಅಂತಾ ಕೇಳಿದ್ದೆನು ಅಂತಾ ನೆನಪಿಲ್ಲ. ನಾನು ರಶೀದಿ ಕೊಟ್ಟಿದ್ದೀರಿ ಕರಾರು ಪತ್ರ ಮಾಡಿಕೊಡಿ ಅಂತಾ ಕೇಳಿದ್ದೆನು. ರಶೀದಿಯನ್ನು ನಮ್ಮ ಮಾವನ ಬಳಿ ಕೊಟ್ಟಿದ್ದರು. ಸದರಿ ರಶೀದಿಯನ್ನು ನಮ್ಮ ಮಾವ ತಂದೆಯ ಕೈಯಲ್ಲಿ ಕೊಟ್ಟರು, ಅದನ್ನು ನಮ್ಮ ತಂದೆ ಕಳೆದುಕೊಟ್ಟಿದ್ದರು. ಸದರಿ ರಶೀದಿಯನ್ನು ನಾನು ನೋಡಿದ್ದೇನೆ. ನನ್ನ ಪ್ರಕಾರ ರಶೀದಿ ಅಂದರೆ, ಅವರ ಲೆಟರ ಹೆಡ್ ದಲ್ಲಿ ಬರೆದುಕೊಟ್ಟಿದ್ದು ಇತ್ತು. ಲೆಟರ್ ಹೆಡ್ ಏನು ಅಂತಾ ಪ್ರಿಂಟ್ ಆಗಿತ್ತು ಅಂತಾ ಗೊತ್ತಿಲ್ಲ. 11 ಲಕ್ಷ ರೂ. ಮುಟ್ಟಿದೆ ಅಂತಾ ಬರೆದುಕೊಟ್ಟಿದ್ದರು. ರಶೀದಿ ಯಾವ ವರ್ಷ ಕೊಟ್ಟಿದ್ದರು ಅಂತಾ ನೆನಪಿಲ್ಲ. ನಾನು ರಶೀದಿ ಪಡೆಯಲು ಪ್ರಯತ್ನಪಟ್ಟಿಲ್ಲ. ರಶೀದಿಯನ್ನು 2018 ರಲ್ಲಿ ಕೊಟ್ಟಿರಬಹುದು, ಆದರೆ ಗೊತ್ತಿಲ್ಲ.

**ಮುಂದಿನ ಪಾಟೀ ಸವಾಲಿಗೆ ಪ್ರಕರಣವನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.